ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

ವಿಷಯ: ಚಾಮರಾಜನಗರ ಜಿಲ್ಲೆಯ ಬೂದಿಪಡಗ ಎಂಬಲ್ಲಿ ನಡೆಸಲಾಗುವ ಉತ್ಖನನ ಹಾಗೂ ಅನ್ವೇಷಣಾ ಕಾರ್ಯಕ್ಕೆ ಅನುದಾನವನ್ನು ಬಿಡುಗಡೆ ಮಾಡುವ ಬಗೆಗೆ.

ಉಲ್ಲೇಖ: 1. ಅಧ್ಯಕ್ಷರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಪತ್ರ ಸಂಖ್ಯೆ:ಮಾಗಂ/ಪ್ರಾಇಪು/303/2021-22, ದಿನಾಂಕ:10-02-2022.

2. ASI, New Delhi Permission Letter No.T-17011/29/2020-EE, ದಿನಾಂಕ: 18-01-2022.

3. ಸನ್ಮಾನ್ಯ ಕುಲಪತಿಗಳ ಆದೇಶ ದಿನಾಂಕ:23-02-2022.

*****

**ಪ್ರಸ್ತಾವನೆ :**

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ವತಿಯಿಂದ ಚಾಮರಾಜನಗರ ಜಿಲ್ಲೆಯ ಬೂದಿಪಡಗ ಎಂಬ ಬೃಹತ್ ಶಿಲಾಯುಗ ಸಮಾಧಿ ನೆಲೆಯಲ್ಲಿ ಉತ್ಖನನ(Excavation) ನಡೆಸಲು ಹಾಗೂ ಹನೂರಿನಲ್ಲಿ ಪ್ರಾಗೈತಿಹಾಸಿಕ ನೆಲೆಗಳ ಅನ್ವೇಷಣೆ(Exploration) ಕಾರ್ಯವನ್ನು ಕೈಗೊಳ್ಳಲು ಭಾರತೀಯ ಪುರಾತತ್ವ ಸರ್ವೇಕ್ಷಣ (ASI), ನವದೆಹಲಿ ಅವರಿಂದ ಅನುಮತಿ ಕೋರಿದ್ದು, ಅದರಂತೆ ಉಲ್ಲೇಖ(2)ರಲ್ಲಿ ಸದರಿ ಸಂಸ್ಥೆಯವರು ಉತ್ಖನನ ಮತ್ತು ಅನ್ವೇಷಣೆ ಕಾರ್ಯಕೈಗೊಳ್ಳಲು ಅನುಮತಿ ನೀಡಲಾಗಿದೆ. ಈ ಸಂಬಂಧ ತಗಲುವ ಖರ್ಚು ವೆಚ್ಚಕ್ಕಾಗಿ ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ರೂ.4,63,000/-ಗಳ ಅನುದಾನ ಬಿಡುಗಡೆ ಮಾಡಲು ಉಲ್ಲೇಖ(1)ರಲ್ಲಿ ಕೋರಿರುವ ಹಿನ್ನಲೆಯಲ್ಲಿ ಮೊದಲನೇ ಹಂತವಾಗಿ ರೂ.1,00,000/-ಗಳನ್ನು 2021-22ನೇ ಆರ್ಥಿಕ ಸಾಲಿನಲ್ಲಿ "ಸಹೋದ್ಯಮ ಕೋರ್ಸ್–46 ಖಾತೆಯ ಆಯವ್ಯಯದಲ್ಲಿನ 189 ಇತರೆ ವೆಚ್ಚಗಳು ಶೀರ್ಷಿಕೆಯಿಂದ" ಭರಿಸಲು ಸನ್ಮಾನ್ಯ ಕುಲಪತಿಯವರು ಆದೇಶಿಸಿರುವಂತೆ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ :

**ಆದೇಶ ಸಂಖ್ಯೆ:ಡಿವಿ9/198/Excavation Work /2020-21 ದಿನಾಂಕ:02-03-2022**

ಮಾನ್ಯ ಕುಲಪತಿಗಳ ಆದೇಶದ ಮೇರೆಗೆ, ಅಧ್ಯಕ್ಷರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಅವರಿಗೆ, ಸದರಿ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ.ವಿ.ಶೋಭಾ, ಸಹಾಯಕ ಪ್ರಾಧ್ಯಾಪಕರು, ಇವರು ವಿಭಾಗದ ವತಿಯಿಂದ ಕೈಗೊಂಡಿರುವ ಚಾಮರಾಜನಗರ ಜಿಲ್ಲೆಯ ಬೂದಿಪಡಗ ಎಂಬ ಬೃಹತ್ ಶಿಲಾಯುಗ ಸಮಾಧಿ ನೆಲೆಯಲ್ಲಿ ಉತ್ಖನನ(Excavation) ನಡೆಸಲು ಹಾಗೂ ಹನೂರಿನಲ್ಲಿ ಪ್ರಾಗೈತಿಹಾಸಿಕ ನೆಲೆಗಳ ಅನ್ವೇಷಣೆಯನ್ನು(Exploration) ಮಾರ್ಚ್‌ನಿಂದ ಜೂನ್ ತಿಂಗಳ (2022)ರ ಅವಧಿಯಲ್ಲಿ ಕಾರ್ಯವನ್ನು ಕೈಗೊಳ್ಳಲು ಅನುಮತಿ ನೀಡಲಾಗಿದೆ, ಹಾಗೂ ಈ ಸಂಬಂಧ ತಗಲುವ ವೆಚ್ಚಗಳಿಗಾಗಿ ರೂ.4,63,000/-ಗಳನ್ನು ಅನುದಾನ ಮಂಜೂರು ಮಾಡಿ, ಮೊದಲನೇ ಹಂತವಾಗಿ ರೂ.1,00,000/-(ರೂಪಾಯಿ ಒಂದು ಲಕ್ಷಗಳು ಮಾತ್ರ)ಗಳನ್ನು ಆರ್ಥಿಕ ಸಾಲಿನಲ್ಲಿ ನಿಯಮಾನುಸಾರ ಬಳಸಿಕೊಳ್ಳಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ ಹಾಗೂ ಜೊತೆಗೆ ಈ ಕೆಳಕಂಡ ಷರತ್ತುಗಳನ್ನು ಸಹ ಪಾಲಿಸತಕ್ಕದ್ದು.

1. ಮೇಲಿನ ಶೀರ್ಷಿಕೆಯಲ್ಲಿ ನಮೂದಿಸಿರುವ ವೆಚ್ಚಗಳನ್ನು ಭರಿಸುವಾಗ KFC ನಿಯಮ ಹಾಗೂ ಅಗತ್ಯ ದಾಖಲೆಗಳೊಂದಿಗೆ ಹುಂಡಿಯನ್ನು ಅಂಗೀಕಾರಕ್ಕಾಗಿ ಸಲ್ಲಿಸುವುದು.

....2

2. ನಿಯಮಗಳ ಉಲ್ಲಂಘನೆಗೆ ಯೋಜನೆಯ ಪ್ರಧಾನ ಪರಿಶೋಧಕರೇ ನೇರ ಹೊಣೆಗಾರರಾಗಿರುತ್ತಾರೆ, ಹಾಗೂ ಆಡಿಟ್ ವೃಂದದವರು ಹಾಗೂ ಹಣಕಾಸು ವಿಭಾಗವು ಕೋರುವ ಅಗತ್ಯ ಮಾಹಿತಿಗಳನ್ನು ಒದಗಿಸತಕ್ಕದ್ದು.
3. ಯೋಜನೆ ಅಂತಿಮದ ನಂತರ ಪೂರ್ಣ ವರದಿ ಹಾಗೂ ಬಳಕೆ ಪ್ರಮಾಣ ಪತ್ರವನ್ನು ವಿಶ್ವವಿದ್ಯಾನಿಲಯಕ್ಕೆ ಕಡ್ಡಾಯವಾಗಿ ಒದಗಿಸತಕ್ಕದ್ದು.
4. ಯೋಜನೆಯ ವರದಿಯನ್ನು ಹಾಗೂ ಇನ್ನಿತರೆ ದಾಖಲೆಗಳನ್ನು ವಿಶ್ವವಿದ್ಯಾನಿಲಯದ ಅನುಮತಿ ಇಲ್ಲದೆ ಬೇರೊಬ್ಬರಿಗೆ ವರ್ಗಾಯಿಸುವ ಅಧಿಕಾರವಿರುವುದಿಲ್ಲ.

ಮೇಲ್ಕಂಡ ವೆಚ್ಚವನ್ನು 2021-22ನೇ ಸಾಲಿನ "ಸಹೋದ್ಯಮ ಕೋರ್ಸ್-46 ಖಾತೆಯ ಆಯವ್ಯಯದಲ್ಲಿನ 189 ಇತರೆ ವೆಚ್ಚಗಳು ಶೀರ್ಷಿಕೆಯಿಂದ" ರೂ.1,00,000/-ಗಳನ್ನು ಭರಿಸುವುದು.

ಆದೇಶದ ಮೇರೆಗೆ,

ಕುಲಸಚಿವ
2/3/2022

ಇವರಿಗೆ,

1. ಅಧ್ಯಕ್ಷರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
2. ಡಾ.ವಿ.ಶೋಭಾ, ಸಹಾಯಕ ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು-ಸದರಿ ವಿಭಾಗದಲ್ಲಿ ಪಾಠ ಪ್ರವಚನಗಳಿಗೆ ತೊಂದರೆಯಾಗದಂತೆ ಉತ್ಖನನ ಮತ್ತು ಅನ್ವೇಷಣೆ ಕಾರ್ಯವನ್ನು ನಡೆಸುವಂತೆ ತಿಳಿಸಲಾಗಿದೆ.
3. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ, ಪ್ರಾಂತೀಯ ಕಛೇರಿ, ಮೈಸೂರು ವಿಭಾಗ, ಮೈಸೂರು.
5. ಮಾನ್ಯ ಕುಲಪತಿ/ಕುಲಸಚಿವರ ಆಪ್ತಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ಕಛೇರಿ ಪ್ರತಿ.